☎ಕಛೇರಿ: 08262 - 220712
ವೆಬ್‌ಸೈಟ್ : www.cudackm.com
ಇ–ಮೇಲ್ : cmr_cudackm@yahoo.in

# ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಹಿರೇಮಗಳೂರು ವಸತಿ ಬಡಾವಣೆ ಒಂದನೇ ಹಂತ ಹಿರೇಮಗಳೂರು– ಕಡೂರು ಬೈ–ಪಾಸ್ ರಸ್ತೆ,
ಕಲ್ಯಾಣನಗರ , ಚಿಕ್ಕಮಗಳೂರು – 577 102

ಕ್ರಮ ಸಂಖ್ಯೆ: ನಅಪ್ರಾಚಿ : ಆಡಳಿತ : 02 : 2008-09 ದಿನಾಂಕ:10-12-2008.

## ::: ನಿವೇಶನಗಳ ಬೇಡಿಕೆ ಸಮೀಕ್ಷೆ :::

*** *** ***

ಚಿಕ್ಕಮಗಳೂರು ನಗರದ ಅಂಬಳೆ ಕೈಗಾರಿಕಾ ವಸಾಹತು ಹಾಗೂ ಕೆ. ಎಂ. ರಸ್ತೆ– ಬೇಲೂರು ರಸ್ತೆಯನ್ನು ಸೇರುವ ವರ್ತುಲ ರಸ್ತೆಗೆ ಹೊಂದಿಕೊಂಡಂತಿರುವ ತೇಗೂರು ಗ್ರಾಮದ ಸರ್ವೆ ನಂ. 110, 111, 112, 113, 115, 118, 132 ಮತ್ತಿತರೆ ಒಟ್ಟು 110 ಎಕರೆ ಜಮೀನಿನಲ್ಲಿ ರೂಪಿಸಲಾಗುತ್ತಿರುವ ವಸತಿ ನಿವೇಶನಗಳ ವಸತಿ ಯೋಜನೆಯನ್ನು ರೂಪಿಸಲು ಉದ್ದೇಶಿಸಲಾಗಿದೆ. ಪ್ರಸ್ತಾವಿತ ಜಾಗವು ಚೆನ್ನಾಪುರ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ನಗರದಿಂದ ಸುಮಾರು 3.5 ಕಿ.ಮೀ. ದೂರದಲ್ಲಿರುತ್ತದೆ. ಪ್ರಸ್ತಾವಿತ ವಿನ್ಯಾಸದಲ್ಲಿ ವಿವಿದ ಅಳತೆಯ ಒಟ್ಟು 1926 ನಿವೇಶನಗಳನ್ನು ರೂಪಿಸಲು ಉದ್ದೇಶಿಸಲಾಗಿದೆ. (ನಿವೇಶನ ಬಯಸುವವರಿಂದ) ನಿವೇಶನಾಸಕ್ತರಿಂದ ನಿವೇಶನಗಳ ಬೇಡಿಕೆಗಾಗಿ / ಸಮೀಕ್ಷೆಗಾಗಿ ಈ ಮುಂದಿನಂತೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಕಾಂಕ್ಷಿಗಳು ನೊಂದಣಿ ಮತ್ತು ಕಾರ್ಡ್ ಶುಲ್ಕವನ್ನು ಪಾವತಿಸಿ ನೊಂದಣಿ ಮಾಡಿಸಿಕೊಳ್ಳಲು ಕೋರಲಾಗಿದೆ.

| ಕ.ಸಂ. | ನಿವೇಶನದ ವಿಸ್ತೀರ್ಣ <u>ಮೀಟರ್‌ಗಳಲ್ಲಿ</u> | ನಿವೇಶನದ ವಿಸ್ತೀರ್ಣ <u>ಅಡಿಗಳಲ್ಲಿ</u> | ನೋಂದಣಿ ಶುಲ್ಕ |
|---|---|---|---|
| 1. | 15.00 x 24.00 | (50 x 80) | ರೂ. 2000.00 + 20.00. |
| 2. | 12.00 x 18.00 | (40 x 60) | ರೂ. 500.00 + 10.00. |
| 3. | 9.00 x 15.00 | (30 x 50) | ರೂ. 500.00 + 10.00. |
| 4. | 9.00 x 12.00 | (30 x 40) | ರೂ. 500.00 + 10.00. |
| 5. | 6.00 x 9.00 | (20 x 30) | ರೂ. 100.00 + 5.00. |

ನಿವೇಶನ ಆಕಾಂಕ್ಷಿಗಳು ಮೇಲಿನ ಪಟ್ಟಿಯಲ್ಲಿ ಹೇಳಿರುವಂತೆ, ನೋಂದಣಿ ಮತ್ತು ಕಾರ್ಡ್ ಶುಲ್ಕವನ್ನು ದಿನಾಂಕ: 12-12-2008 ರಿಂದ 12-01-2009 ರೊಳಗಾಗಿ ಐಎನ್‌ಜಿ ವೈಶ್ಯ ಬ್ಯಾಂಕ್ / ಇಂಡಿಯನ್ ಬ್ಯಾಂಕ್ / ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್ ಚಿಕ್ಕಮಗಳೂರು (ಯಾವುದಾದರು ಒಂದು ಬ್ಯಾಂಕಿನಲ್ಲಿ) ಇಲ್ಲಿ ಪಾವತಿಸಿ ನೋಂದಣಿ ಮಾಡಿಸಿಕೊಳ್ಳಲು ಕೋರಿದೆ. 6.00 x 9.00 ಮೀಟರ್ (20 x 30 ಅಡಿ) ಅಳತೆಯ ನಿವೇಶನಕ್ಕೆ ವಾರ್ಷಿಕ ರೂ. 12000.00 ಕ್ಕಿಂತ ಕಡಿಮೆ ಆದಾಯ ಇರುವವರು ಮಾತ್ರ ಅರ್ಜಿ ಸಲ್ಲಿಸಬಹುದಾಗಿರುತ್ತದೆ, ಮತ್ತು 6.00 x 9.00 ಮೀಟರ್ ಅಳತೆಯ ನಿವೇಶನಕ್ಕೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ನೋಂದಣಿ ಶುಲ್ಕ ರೂ. 50.00 + 5.00 ಆಗಿರುತ್ತದೆ, ನೋಂದಣಿ ಶುಲ್ಕವನ್ನು ಯಾವುದೇ ಕಾರಣಕ್ಕೂ ವಾಪಸ್ಸು ಹಿಂದಿರುಗಿಸುವುದಿಲ್ಲ ಮತ್ತು ನಿವೇಶನದ ಬೆಲೆಯಲ್ಲಿ ಹೋಂದಾಣಿಕೆ ಮಾಡಿಕೊಳ್ಳುವುದಿಲ್ಲ, ಹೆಚ್ಚಿಗೆ ಮಾಹಿತಿಯನ್ನು ಪ್ರಾಧಿಕಾರದ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಸಹಿ/–
ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು

ಆಡಳಿತ ಇ. ಆದರ್ಶ.